ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ೩ ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ೧೪೦೦ ಪೌರ ಕಾರ್ಮಿಕರನ್ನು ಸೆಲೆಕ್ಟ್ ಮಾಡಬೇಕೆಂದು ಆದೇಶ ಕೊಟ್ಟು ರಿಕ್ರೂಟ್‌ಮೆಂಟ್ ಕಮಿಟಿಯನ್ನು ನಾಲ್ಕು ದಿವಸಗಳ ಹಿಂದೆ ಮಾಡಿದ್ದೇವೆ. ಹೊರಗಡೆ ಯವರು ಅಂದರೆ ಆಂಧ್ರಪ್ರದೇಶದವರು ಮತ್ತು ತಮಿಳುನಾಡು ಇಲ್ಲಿಂದ ಬಂದವರಿಗೆ ಡೈರೆಕ್ಟಾಗಿ ಕೆಲಸ ಕೊಡತಕ್ಕದ್ದು ಸರಿಯಲ್ಲ. ನಾವು ರೋಸ್ಟರ್ ಪ್ರಕಾರ ನಿಷ್ಪಕ್ಷಪಾತವಾಗಿ ನಮ್ಮಲ್ಲಿ ಕೆಲಸ ಮಾಡತಕ್ಕವರನ್ನೆ ನೇಮಕ ಮಾಡಿಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಸದಸ್ಯರಿಗೆ ಕೊಡುತ್ತಿದ್ದೇನೆ.

ಶ್ರೀ ಪಿ. ರಾಮದೇವ್.—ಕಮೀಷನರ್ ಪವರ್ಸ್‌ನ್ನು ಮಿಸ್‌ಯೂಸ್ ಮಾಡಿಕೊಳ್ಳುತ್ತಿದ್ದಾರೆ. There is misuse of powers. Will you order an enquiry to probe into this ? ಮಾನ್ಯ ಸದಸ್ಯರು ಹೇಳಿದ ಹಾಗೆ ೩ ಸಾವಿರದಿಂದ ೧೦ ಸಾವಿರ ರೂಪಾಯಿಗಳವರೆಗೂ ತೆಗೆದುಕೊಂಡು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಧರ್ಮಸಿಂಗ್.—೧೯೭೭-೭೮, ೧೯೭೮-೭೯, ೧೯೭೯-೮೦ರಿಂದ ಕಾರ್ಪೊರೇಷನ್‌ನಲ್ಲಿ ಆ ತರಹ ಆಗಿಲ್ಲ. ಹಿಂದೆ ಆಗಿರಬಹುದು. ಈಗ ಆದೇಶ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಏನು ಆರೋಪ ಮಾಡುತ್ತಿದ್ದಾರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಪರಪ್ಪಕಳ್ಳಿಗುಡ್ಡ.—ಬೆಂಗಳೂರು ನಗರದಲ್ಲಿರತಕ್ಕ ಕಮೀಷನರ್‌ರವರು ಉತ್ತರ ಕರ್ನಾಟಕದ ಭಾಗದಲ್ಲಿದ್ದಾಗ ಬಹಳ ಬಿಗಿಯಿಂದ ಇದ್ದರು ಎಂದು ಜನರು ಹೇಳುತ್ತಿದ್ದರು. ತಾವೇನು ಈಗ ಉಲ್ಟಾ ಹೇಳುತ್ತಿದ್ದೀರೋ ಏನೋ ಗೊತ್ತಿಲ್ಲ.

(No Answer)

Construction of L.H. III Stage, Bangalore

154. B. V. RAMACHANDRA REDDY (Varthur).—Will the Minister for Public Works be pleased to state :—

(a) the estimated cost provided in the Budget during 1978-79 for construction of Legislator's Home, III Stage ;

(b) the final cost of estimate now (Reasons for increased cost be furnished) ;

(c) the total cubic meters of the following were used on the work :

(a) (1:5:10) concrete	(b) (1:4:8) concrete
(c) (1:3:6) concrete	(d) (1:2:4) concrete
(e) (1:1½:3) concrete	(f) (1:1:2) concrete
(g) (1:8) Mortar	(h) (1:6) Mortar
(i) (1:4) Mortar	(j) (1:3) Mortar

(d) total number of bags of cement allotted to the work and number of bags of cement actually used on the work ;

(e) quantity of jelly and sand used on the work be furnished;

SRI KAGODU THIMMAPPA (Minister for Public Works).—

(a) The work was not included in the Budget Estimates of 1978-79.

(b) The revised estimated cost of the work is Rs. 100 lakhs. The reason for increase in cost is due to increased scope of work.

(c) Quantities in cubic meters and square meters are noted in the statement is laid on the table.

(d) 47,566 bags of cement were allotted and have been utilised except 124 bags which are on hand with Karnataka State Construction Corporation Limited the statement is laid on the table.

(e) Quantities of jelly and sand used on the work is noted under :

Jelly (20 mm)	4.015 cmtr
Jelly (40 mm)	896 cmtr
Sand	4 455 cmtr

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಶ್ನೆ 3ರಲ್ಲಿ ರಿವೈಸ್ ಮಾಡಿದ್ದೇವೆ ೧೯೦ ಲಕ್ಷ ಎಂದು ಇದೆ ಅದನ್ನು ನೀವು ೧೯೪ ಲಕ್ಷ ಎಂದು ಓದಿಕೊಳ್ಳಬೇಕು.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—೧೯೭೮-೭೯ನೇ ಆಯವ್ಯಯದಲ್ಲಿ ಸೇರಿಸಿಲ್ಲವೆಂದು ಹೇಳಿದ್ದೀರಿ. ಈ ಕಾಮಗಾರಿ ಅಂದಾಜು ಪಟ್ಟಿಯನ್ನು ಯಾವಾಗ ಸಿದ್ಧಪಡಿಸಲಾಯಿತು ? ಕೆಲಸ ಯಾವಾಗ ಪ್ರಾರಂಭವಾಯಿತು ?

ಶ್ರೀ ಕಾಗೋಡು ತಿಮ್ಮಪ್ಪ.—ಅಂದಾಜು ನೆಚ್ಚ ೧೦೨ ಲಕ್ಷ. ೨೫-೧೧-೧೯೭೯ರಲ್ಲಿ ಕೆಲಸ ಪ್ರಾರಂಭವಾಗಿದೆ. ಕೆಲಸವನ್ನು ಇಲಾಖೆಯು ಮುಖಾಂತರ ಮತ್ತು ಕನ್ಸ್‌ಟ್ರಕ್ಷನ್ ಕಾರ್ಪೊರೇಷನ್ ಮುಖಾಂತರ ಶುರು ಮಾಡಲಾಗಿದೆ.

ಶ್ರೀ ಬಿ.ವಿ. ರಾಮಚಂದ್ರರೆಡ್ಡಿ.—೧೯೭೯ರಲ್ಲಿ ಈ ಕೆಲಸದ ಅಂದಾಜು ಸಿದ್ಧವಾಯಿತು. ೧೯೭೮ನೇ ಇಸವಿಯಲ್ಲಿ ೮ ಲಕ್ಷವನ್ನು ಬಜೆಟ್‌ನಲ್ಲಿ ಸೇರಿಸಲಾಗಿದೆ. ೧೯೭೯-೮೦ನೇ ಬಜೆಟ್‌ನಲ್ಲಿ ೭೮ ಲಕ್ಷ ರೂಪಾಯಿಗಳನ್ನು ಸೇರಿಸಿದ್ದಾರೆ. ಇವೆರಡರಲ್ಲಿ ಯಾವುದು ನಿಜ.

ಶ್ರೀ ಕಾಗೋಡು ತಿಮ್ಮಪ್ಪ.—೭೮ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿದ್ದೇವೆ. ಅಧ್ಯಕ್ಷರು ಬಂದು ನೋಡಿದ ಮೇಲೆ ಪೀರ್ಮಾನವನ್ನು ತೆಗೆದುಕೊಳ್ಳುವಾಗ ಸ್ವಲ್ಪ ಹೆಚ್ಚು ಕಡಿಮೆ ಯಾಗಿದೆ.

ಶ್ರೀ ಎಚ್. ಗಂಗಾಧರಸ್ —ಕಂಟ್ರಾಕ್ಟ್ ವರ್ಕ್ ಕೊಟ್ಟಿದ್ದೀರಿ ? ಪೀಸ್ ವರ್ಕ್ ಕೊಟ್ಟಿದ್ದೀರಿ ? ಪೀಸ್‌ವರ್ಕ್ ಕಂಟ್ರಾಕ್ಟ್ ಕೊಟ್ಟಿದ್ದರೆ ಎಷ್ಟು ಜನರಿಗೆ ಕೊಟ್ಟಿದ್ದೀರಿ ? ಇವರಲ್ಲಿ ಕರ್ನಾಟಕದವರು ಎಷ್ಟು ? ಬೇರೆಯವರು ಎಷ್ಟು ?

ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ಭಾಗವನ್ನು ಇಲಾಖೆಯು ಮುಖಾಂತರ ಮತ್ತು ಕನ್ಸ್‌ಟ್ರಕ್ಷನ್ ಕಾರ್ಪೊರೇಷನ್ ಮುಖಾಂತರ ಮಾಡಿಸಲಾಗಿದೆ.

ಶ್ರೀ ಬಿ. ವಿ. ರಾಮಚಂದ್ರ ರೆಡ್ಡಿ.—೧೯೭೮ರಲ್ಲಿ ೧೦೨ ಲಕ್ಷ ಅಂದಾಜು ಎಂದು ಹೇಳಿದ್ದೀರಿ, ಈಗ ೧೯೪ ಲಕ್ಷ ಅಂದಾಜಿಗೆ ಏರಿದೆ ಎಂದು ಹೇಳಿದ್ದೀರಿ. ೧೦೨ ಲಕ್ಷ ಇದ್ದದ್ದು ೧೯೪ ಲಕ್ಷಕ್ಕೆ ಹೇಗೆ ಏರಿತು ?

ಶ್ರೀ ಕಾಗೋಡು ತಿಮ್ಮಪ್ಪ.—ಪೀರ್ಮ ಚಾಸ್ತಿಯಾಗಿರುವುದಕ್ಕೆ ಕಾರಣ ಅಧ್ಯಕ್ಷರು ಬಂದು ನೋಡಿ ಬದಲಾವಣೆಗಳನ್ನು ಹೇಳಿದ್ದರಿಂದ ಚಾಸ್ತಿಯಾಗಿದೆ. ಅವರು ಬಂದು ನೋಡಿ kitchen, dining

hall, lounge, Conference hall and for other amenities along with 100 rooms, ಇವುಗಳಿಗೆ ೩ ರೂಮ್‌ಗಳನ್ನು ಸೇರಿಸಿಕೊಂಡಿದ್ದರು, ಕೊನೆಗೆ ೬೦ ರೂಮ್‌ಗಳನ್ನು ಸೇರಿಸಿ ಕೊಂಡು ಆದರ ಡಿಸೈನ್ ಮತ್ತಿತರೆ ಕೆಲಸಗಳೆಲ್ಲಾ ಸೇರಿಕೊಂಡು ಜಾಸ್ತಿಯಾಯಿತು.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—೧೯೭೮-೭೯ರಲ್ಲಿ ಆಗಿದ್ದ ಅಂದಾಜು ಜಾಸ್ತಿಯಾಗಲು ಸಮ್ಮೇಳನ ಸಭಾಂಗಣ, ಹೆಚ್ಚುವರಿ ರೂಮ್ ಇತರೆ ಕೆಲವು ಐಟಂಗಳನ್ನು ಸೇರಿಸಿಕೊಂಡಿದ್ದರಿಂದ ಅಂದಾಜು ಜಾಸ್ತಿಯಾಗಿದೆ. ಫ್ಲೋರಿಂಗ್ ಕೂಡ ಜಾಸ್ತಿಯಾಗಿರಬೇಕು. ೧೯ ಲಕ್ಷ ರೂಪಾಯಿಗಳಲ್ಲಿ ಪೀಠೋಪಕರಣಗಳನ್ನು ಸೇರಿಸಿಕೊಂಡಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಮೊದಲು ಅಂದಾಜು ತಯಾರು ಮಾಡುವಾಗ ರಿವೈಸ್ ಮಾಡ ಬೇಕೆಂದು ಮಾಡಿದ್ದಾರೆ. ಹಿಂದೆ ಯಾವುದು ಇತ್ತೋ ಗೊತ್ತಿಲ್ಲ. ಅಧ್ಯಕ್ಷರು ಬಂದು ನೋಡಿ ಕೆಲವು ಬದಲಾವಣೆಗಳನ್ನು ಸೂಚಿಸಿದಾಗ ಪರಿಷ್ಕೃತ ಅಂದಾಜು ತಯಾರು ಮಾಡಿದ್ದರಿಂದ ಕಾಸ್ಟ್ ಜಾಸ್ತಿ ಯಾಗಿದೆ, ತಾವು ಕೇಳುವುದೆಲ್ಲಾ ಬೇಕಾದರೆ ಡಿಟೈಲ್ ಎಸ್ಟಿಮೇಟ್ ನೋಡಿ ಹೇಳಬೇಕಾಗುತ್ತದೆ.

ಶ್ರೀ ಬಿ ವಿ. ರಾಮಚಂದ್ರರೆಡ್ಡಿ.—೪೭,೫೬೬ ಚೀಲ ಸಿಮೆಂಟ್ ನೀಡಿದ್ದೇವೆಂದು ಹೇಳಿದ್ದಾರೆ. ಸಿಮೆಂಟನ್ನು ಕಾಮಗಾರಿ ಇಲಾಖೆಯವರು Indian Standards specification ಪ್ರಕಾರ ಖರ್ಚು ಮಾಡಬೇಕೆಂದು ಹೇಳುತ್ತಾರೆ. ಇವರು ಯಾವ ಆಧಾರದ ಮೇಲೆ ಖರ್ಚು ಮಾಡಿದ್ದಾರೆ ?

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಒಂದು ಅಂದಾಜನ್ನು ಸ್ವೀಕೃತ ಮಾಡಿದ ಮೇಲೆ ಸಿಮೆಂಟನ್ನು ಪ್ಲಾಸ್ಟರಿಂಗ್, ಬೀಮ್ as per specification and design. ಎಷ್ಟು ಐಟಂಗಳು ಇರುತ್ತವೆಯೋ ಆ ಕೆಲಸಗಳಿಗೆ ಇಂಡಿಯನ್ ಸ್ಟ್ಯಾಂಡರ್ಡ್ ಸ್ಪೆಸಿಫಿಕೇಶನ್ ಪ್ರಕಾರ ಸಿಮೆಂಟ್ ಕೊಟ್ಟಿದ್ದೇವೆ.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಸಿಮೆಂಟನ್ನು ಇಂಡಿಯನ್ ಸ್ಟ್ಯಾಂಡರ್ಡ್ ಸ್ಪೆಸಿಫಿಕೇಶನ್ ಪ್ರಕಾರ ಯೂಸ್ ಮಾಡಿದರೂ ೪ ಸಾವಿರ ಮೂಟೆಗಳು ವ್ಯತ್ಯಾಸ ಬರುತ್ತದೆ. ಉದಾಹರಣೆ ೧ : ೪ ಇಂಡಿಯನ್ ಸ್ಟ್ಯಾಂಡರ್ಡ್ ಸ್ಪೆಸಿಫಿಕೇಶನ್ ಪ್ರಕಾರ ಉಪಯೋಗಿಸಿದರೆ ಇನ್ನು ಸ್ವಲ್ಪ ಜಾಸ್ತಿ ಉಪ ಯೋಗಿಸಿದರೂ ನಾಲ್ಕೈದು ಸಾವಿರ ಮೂಟೆ ಸಿಮೆಂಟ್ ಉಳಿಯುತ್ತದೆ. ಜಾಸ್ತಿ ಉಪಯೋಗಿಸುವುದು ಸರಿಯೇ ? ಇದರಲ್ಲಿ ತಪ್ಪಾಗಿದ್ದರೆ ತನಿಖೆ ಮಾಡಿಸುತ್ತೀರಾ ? ಇಂಥಿಂಥಾ ಐಟಂಗೆ ಇಷ್ಟಿಷ್ಟು ಸಿಮೆಂಟ್ ಹಾಕಬೇಕೆಂದು ನಿಮ್ಮಲ್ಲಿ ಪಟ್ಟಿ ಇದೆಯೇ ? ಇಷ್ಟಿಷ್ಟು ಸಿಮೆಂಟ್ ಕೊಟ್ಟಿದ್ದೇವೆ ಎನ್ನುವ ಅಂಕಿಅಂಶಗಳು ನಿಮ್ಮಲ್ಲಿ ಇವೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಲೆಕ್ಕಾಚಾರ ಮಾಡಿ ಎಲ್ಲೆಲ್ಲಿ ಎಷ್ಟೆಷ್ಟು ಸಿಮೆಂಟ್ ಖರ್ಚು ಮಾಡ ಬೇಕೆನ್ನುವುದನ್ನು ಡಿಸೈನ್ ಮಾಡಿ ಡಿಸೈನ್ ಸೆಕ್ಷನ್ ಯಾವ ಪ್ರಕಾರ ಮಾಡಿರುತ್ತದೋ ಆ ಪ್ರಕಾರ ಖರ್ಚು ಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದೇವೆ. ಯಾವ್ಯಾವ ಪ್ರಮಾಣದಲ್ಲಿ ಎಷ್ಟೆಷ್ಟು ಸಿಮೆಂಟ್ ಖರ್ಚಾಗಿದೆ ಎಂಬುದನ್ನು ಉತ್ತರದಲ್ಲಿ ಕೊಟ್ಟಿದ್ದೇವೆ, ಆದರೂ ಕೂಡ ಜಾಸ್ತಿ ಸಿಮೆಂಟ್ ಖರ್ಚಾಗಿದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇನ್ನೊಂದು ಸಾರಿ ಲೆಕ್ಕಾಚಾರ ಮಾಡಿಸುತ್ತೇವೆ. ಏನಾದರೂ ಆ ರೀತಿ ಹೆಚ್ಚು ಉಪಯೋಗವಾಗಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳು ತ್ತೇವೆ.

Cauvery II Stage

479. SRI M. CHANDRASHEKAR (Jayanagar).—Will the Minister for Housing and Urban Development be pleased to state :—

(a) the amount spent either to by BWSSB towards the laying of Cauvery II Stage Water Mains ;

(b) the physical progress of the work upto date ;

(c) whether it is possible to commission the said main by November 1981 as programmed ;